# ಉಲ್ಟಾ ಹೊಡೆದ ಧನುಷ್

ಜಲ್ಲಿಕಟ್ಟು ವಿವಾದದ ಫಲಿತಾಂಶ ಏನೇ ಆಗಿರಲಿ, ತಮಿಳುನಾಡಿನ ಎಲ್ಲ ನಟ – ನಟಿಯರನ್ನೂ ಒಂದೇ ವೇದಿಕೆಗೆ ಸೇರಿಸುವ ಕೆಲಸವನ್ನು ಈ ವಿವಾದ ಮಾಡಿದೆ. ಅದರಲ್ಲೂ ಪ್ರಾಣಿಗಳ ಹಕ್ಕು ರಕ್ಷಣಾ ಸಂಘ ‘ಪೆಟಾ’ದ ರಾಯಭಾರಿ ಆಗಿದ್ದ ಧನುಷ್ ಯೂ–ಟರ್ನ್ ಹೊಡೆದು ಜಲ್ಲಿಕಟ್ಟು ಗೂಳಿ ಕಾಳಗವನ್ನು ಬೆಂಬಲಿಸಿದ್ದು ವಿಶೇಷ. ತಮಿಳಿನ ಜನಪ್ರಿಯ ಯುವನಟ ಧನುಷ್, ಹೀಗೆ ಉಲ್ಟಾ ಹೊಡೆದದ್ದು ತಮಾಷೆಗೂ ಕಾರಣವಾಯಿತು. 2011ರಲ್ಲಿ ಪೆಟಾ ದ ರಾಯಭಾರಿ ಆಗಿ ಮಿಂಚಿದ ಧನುಷ್ ಗೆ ಆ ವರ್ಷದ **hottest vegetarian celebrity** ಎಂಬ ಬಿರುದು ನೀಡಲಾಗಿತ್ತು. ಆದರೆ ಮೊನ್ನೆ ಜಲ್ಲಿಕಟ್ಟು ಚಳವಳಿ ಇಡೀ ತಮಿಳುನಾಡನ್ನು ನಡುಗಿಸಿದಾಗ ಮಾಧ್ಯಮಗಳ ಮುಂದೆ ಬಂದ ಧನುಷ್, ‘ನಾನು ಯಾವತ್ತೂ ಪೆಟಾ ದ ರಾಯಭಾರಿ ಆಗಿರಲಿಲ್ಲ. ಆಗ ಸಸ್ಯಾಹಾರ ಅಭ್ಯಾಸ ಮಾಡುತ್ತಿದ್ದೆ. ಅದಕ್ಕಾಗಿ ಪೆಟಾ ನನಗೊಂದು ಪ್ರಶಸ್ತಿ ನೀಡಿತ್ತು, ಅಷ್ಟೆ’ ಎಂದು ಸ್ಪಷ್ಟೀಕರಣ ನೀಡಿದ್ದಾನೆ.

ಆದರೆ ಜಲ್ಲಿಕಟ್ಟು ಅಭಿಮಾನಿಗಳು ಸ್ಪಷ್ಟೀಕರಣಕ್ಕೆ ಮಣಿಯದೆ, ಧನುಷ್ ವಿರುದ್ಧ ಪ್ರತಿಭಟನೆ ನಡೆಸಿದಾಗ ಇನ್ನಷ್ಟು ಹುಷಾರಾದ ಧನುಷ್, ‘ನಾನು ಪೆಟಾ ದ ಜತೆ ಇರಲೇ ಇಲ್ಲ. ನನ್ನ ಕುಟುಂಬದಲ್ಲೂ ಯಾರೂ ಅಲ್ಲಿ ಸದಸ್ಯರಲ್ಲ. ಅವರು ನನಗೆ ಪ್ರಶಸ್ತಿ ಕೊಟ್ಟದ್ದೇ ಅವಮಾನದ ಸಂಗತಿ’ ಎಂದು ಉಗ್ರ ಹೇಳಿಕೆ ನೀಡಿದ. ಯಾರಾದರೂ ಪ್ರಶಸ್ತಿ ಕೊಟ್ಟರೆ ಅದು ಕೊಟ್ಟವರಿಗೆ ಅವಮಾನವೇ.. ಅಥವಾ ಇಸಿದುಕೊಂಡವರಿಗೆ ಅವಮಾನವೆ... ಎನ್ನುವುದೀಗ ಕೋಲಿವುಡ್‌ನಲ್ಲಿ ಚರ್ಚೆಯ ಸಂಗತಿಯಾಗಿದೆ!



ತಮಿಳುನಾಡಿನಲ್ಲಿ ಸಿನಿಮಾ ಹೀರೋಗಳನ್ನು ‘ಅತಿಮಾನುಷ’ರೆಂಬಂತೆ ಬೆಳೆಸಿರುವ ಅಭಿಮಾನಿಗಳನ್ನು ಎದುರು ಹಾಕಿಕೊಂಡರೆ ಯಾರಿಗೂ ಉಳಿಗಾಲವಿಲ್ಲ ಎನ್ನುವುದಕ್ಕೆ ಧನುಷ್ ಇತ್ತೀಚಿನ ಉದಾಹರಣೆ. ತಮಿಳಿನ ಯುವನಟರಲ್ಲಿ ಅತ್ಯಧಿಕ ಅಭಿಮಾನಿಗಳನ್ನು ಹೊಂದಿರುವ ನಟ ಧನುಷ್. ಈಗಾಗಲೆ ಹಿರಿಯರಾಗಿರುವ ರಜನಿ, ವಿಜಯ್, ಕಮಲ್, ಸೂರ್ಯ, ಅಜಿತ್, ವಿಕ್ರಂ ಇವರನ್ನು ಬಿಟ್ಟರೆ ಸಿನಿಮಾವೊಂದಕ್ಕೆ ಅತ್ಯಧಿಕ ಸಂಭಾವನೆ ಪಡೆಯುತ್ತಿರುವ ನಟ ಧನುಷ್. ಮಾವ ರಜನಿಕಾಂತ್ ಚಿತ್ರವೊಂದಕ್ಕೆ 60 ಕೋಟಿ ರೂಪಾಯಿ ಪಡೆಯುತ್ತಿದ್ದರೆ, ಅಳಿಯ ಧನುಷ್ 10ರಿಂದ 13 ಕೋಟಿ ರೂಪಾಯಿ ಪಡೆಯುತ್ತಿದ್ದಾನೆ. ತಮಿಳು ಮಾತ್ರವಲ್ಲ ಹಿಂದಿಯಲ್ಲೂ ನಟಿಸಿ ಯಶಸ್ವಿಯಾಗಿರುವ ಧನುಷ್‌ಗೆ ಅಲ್ಲೂ ಅಭಿಮಾನಿಗಳಿದ್ದಾರೆ. 2016ರಲ್ಲಿ ಈತ ನಟಿಸಿದ ಎಲ್ಲ ಸಿನಿಮಾಗಳೂ ಹಿಟ್ ಆಗಿರುವುದರಿಂದ ಈ ವರ್ಷವೂ ಬೇಡಿಕೆ ಚೆನ್ನಾಗಿದೆ. ‘ವಿಐಪಿ’ ಮತ್ತು ‘ಮಾರಿ’ ಸಿನಿಮಾಗಳ ಎರಡನೇ ಭಾಗ ಸಹಿತ ಈ ವರ್ಷ ಈತ ನಟಿಸಿದ ಒಟ್ಟು 5 ಸಿನಿಮಾಗಳು ತೆರೆಗೆ ಬರಲಿವೆ. ಸುಮಾರು 180 ಕೋಟಿ ರೂಪಾಯಿ ಆಸ್ತಿ ಒಡೆಯ ಧನುಷ್, ಜಲ್ಲಿಕಟ್ಟು ವಿವಾದದಲ್ಲಿ ಸುಖಾಸುಮ್ಮನೆ ಸಿಕ್ಕುಬಿದ್ದು ಈ ಬೇಡಿಕೆಯನ್ನು ಕಳೆದುಕೊಂಡಿದ್ದರೆ ಮೂರ್ಖತನವೇ ಆಗುತ್ತಿತ್ತು. ಪಡೆದು ಮೆರೆದ ಪ್ರಶಸ್ತಿಯನ್ನೇ ಅವಮಾನ ಎಂದು ಹೇಳಿ ಸಜ್ಜನರಿಂದ ಲೇವಡಿಗೆ ಒಳಗಾದರೂ, ಅಭಿಮಾನಿಗಳ ಅವಕೃಪೆಗೆ ತುತ್ತಾಗುವುದು ಬೇಡ ಎಂದು ಆತ ನಿರ್ಧರಿಸಿದ್ದಕ್ಕೆ ಮಾವ ರಜನಿಕಾಂತ್ ಒತ್ತಡವೂ ಕಾರಣ ಎನ್ನಲಾಗಿದೆ.

ವೆಂಕಟೇಶ ಪ್ರಭು ಎನ್ನುವುದು ಧನುಷ್ ಮೂಲ ಹೆಸರು. (ಬರ್ತ್‌ಡೇ 28–7–1983) ರಂಗಭೂಮಿಯ ಹೆಸರು ಧನುಷ್ ಎನ್ನುವುದೇ ಸಿನಿಮಾಗೂ ಖಾಯಂ ಆಯಿತು. ನಿರ್ದೇಶಕ, ನಿರ್ಮಾಪಕ ಕಸ್ತೂರಿ ರಾಜಾ ಮಗನಾದ್ದರಿಂದ ಸಿನಿಮಾದಲ್ಲಿ ಅವಕಾಶ ಸಿಕ್ಕುವುದು ತಡವಾಗಲಿಲ್ಲ. ರಜನಿಕಾಂತ್ ಮಗಳು ಐಶ್ವರ್ಯಳನ್ನು ಮದುವೆಯಾದ ಬಳಿಕ ಅಭಿಮಾನಿಗಳ ಸಂಖ್ಯೆ ಇನ್ನಷ್ಟು ಏರಿತು. ನೋಡಲು ಅಷ್ಟೇನೂ ಸ್ಫುರದ್ರೂಪಿ ಅಲ್ಲದಿದ್ದರೂ ರಜನಿ ಅಳಿಯನಾದ್ದರಿಂದ ಚಿತ್ರಗಳಿಗೆ ಓಪನಿಂಗ್ ಚೆನ್ನಾಗಿಯೇ ಸಿಗತೊಡಗಿತು. ಸಿಕ್ಕ ಅವಕಾಶಗಳನ್ನು ಅತ್ಯುತ್ತಮವಾಗಿ ಸದುಪಯೋಗ ಪಡಿಸಿಕೊಂಡ ಧನುಷ್ ತನ್ನದೇ ಆದ ಸ್ಟೈಲ್ ರೂಪಿಸಿಕೊಂಡ. ಈಗಂತೂ ಈತ ತಮಿಳು ಯುವಜನರ ಕಣ್ಮಣಿ.

ಚೆನ್ನೈಯ ಪಮ್ಮಾಳ್ ಕ್ರಾಸ್ ಸ್ಟ್ರೀಟ್‌ನಲ್ಲಿ 18 ಕೋಟಿ ಬೆಲೆ ಬಾಳುವ ಬಂಗಲೆ ಹೊಂದಿರುವ ಧನುಷ್‌ಗೆ, ಕೋಟಿ ಬೆಲೆಯ ಆಡಿ ಮತ್ತು ರೇಂಜ್ ರೋವರ್ ಕಾರುಗಳ ಮೋಹವೂ ಇದೆ. ಸೆಂಟರ್‌ಫ್ರೆಶ್ ಮತ್ತು ಸೆವೆನ್ ಅಪ್ ಉತ್ಪನ್ನಗಳ ಬ್ರ್ಯಾಂಡ್ ರಾಯಭಾರಿಯಾಗಿಯೂ ಸಾಕಷ್ಟು ಹಣ ಬರುತ್ತಿದೆ.

ನಟ, ನಿರ್ಮಾಪಕ, ನಿರ್ದೇಶಕ, ಗೀತರಚನೆಕಾರ, ಸಂಗೀತ ಸಂಯೋಜಕ, ಗಾಯಕ– ಹೀಗೆ ಬಹುಮುಖಿ ಪ್ರತಿಭೆಯಾಗಿರುವ ಧನುಷ್ ತನ್ನ ಹಲವು ಸ್ವಂತ ಸಿನಿಮಾಗಳಿಗೆ ಸಂಗೀತ ಸಂಯೋಜಿಸಿದ್ದಿದೆ. ಐಶ್ವರ್ಯ ಧನುಷ್ ಚೊಚ್ಚಲ ನಿರ್ದೇಶನದ ‘3’ ಸಿನಿಮಾಕ್ಕೆ ಧನುಷ್ ಹಾಡಿದ ‘ವೈ ದಿಸ್ ಕೊಲವೆರಿ ಡಿ’ ಅಂತರ್ಜಾಲದಲ್ಲಿ ಅತ್ಯಧಿಕ ಹುಡುಕಾಟಕ್ಕೆ ಒಳಗಾದ ಹಾಡು ಎಂಬ ದಾಖಲೆ ಬರೆಯಿತು. ಇದರ ಬಹುಪಾಲು ಸಾಹಿತ್ಯವೂ ಧನುಷ್‌ನದ್ದೇ. ಕನ್ನಡದಲ್ಲೂ ‘ವಜ್ರಕಾಯ’ ಸಿನಿಮಾಕ್ಕೆ ಧನುಷ್ ‘ನೋ ಪ್ರಾಬ್ಲಂ’ ಎಂಬ ಹಾಡು ಹಾಡಿದ್ದು ದೊಡ್ಡ ಸುದ್ದಿಯಾಗಿತ್ತು.

ತೆರೆಯ ಮೇಲೆ ಅಭಿಮಾನಿಗಳಿಗೆ ಸಾಕಷ್ಟು ಮನರಂಜನೆ ನೀಡಿರುವ ಧನುಷ್ ಈಗ ಜಲ್ಲಿಕಟ್ಟು ತಿರುಮಂತ್ರದ ಮೂಲದ ತೆರೆಯ ಹೊರಗೂ ಸಾಕಷ್ಟು ಮನರಂಜನೆ ನೀಡಿದ್ದಾನೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65